**<u>ಅಸಲು ದಾವಾ ಸಂಖ್ಯೆ - 151/2017</u>** **ಡಿ.ಡಬ್ಲ್ಯೂ:-1**

ದಿನಾಂಕಃ **03-02-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು :- ವಾದಿ ಪರ ವಕೀಲರಿಂದ :-</u>**

ನಾನು ಖರೀದಿ ಮಾಡಿದ ಆಸ್ತಿಯ ಖಾತೆ ನಂ.108. ಖಾತೆ ನಂ. 108 ನ್ನು ಲಕ್ಷ್ಮನಾಯ್ಕ ಬಿನ್ ರಾಮನಾಯ್ಕ ರವರಿಂದ ಖರೀದಿ ಮಾಡಿರುತ್ತೇನೆ. ಲಕ್ಷ್ಮನಾಯ್ಕರವರು ಮೇಲ್ಕಂಡ ಆಸ್ತಿಗೆ ಸಂಬಂಧಿಸಿದಂತೆ ನಮೂನೆ 9 ಮತ್ತು 11 ನ್ನು ತೋರಿಸಿದ ಮೇರೆಗೆ ಖರೀದಿ ಮಾಡಿರುತ್ತೇನೆ. ಖಾತೆ ನಂ.108 ರ ವಿಸ್ತೀರ್ಣ 30 40 ಎಂದು ನಮೂನೆ 9 ಮತ್ತು 11 ರಲ್ಲಿ ನಮೂದಾಗಿರುತ್ತದೆ. ಸದರಿ ಆಸ್ತಿಯನ್ನು ನಾನು ಖರೀದಿ ಸಮಯದಲ್ಲಿ ನಮ್ಮ ಊರಿನ ಪ್ರಮುಖರಾದ ಗೋಪಾಲನಾಯ್ಕ, ರೇಖ್ಯೆನಾಯ್ಕ, ಜಯನಾಯ್ಕ ರವರಿಂದ ಅಳತೆ ಮಾಡಿಸಿರುತ್ತೇನೆ. ನಮೂನೆ 9 ಮತ್ತು 11 ರ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1995 ನೇ ಸಾಲಿನಲ್ಲಿ ಸದರಿ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ತಿಮ್ಲಾಪುರ ಗ್ರಾಮ ಪಂಚಾಯಿತಿಯವರು ಲಕ್ಷ್ಮನಾಯ್ಕ ರವರ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ ಎಂದು ಹಿಂಬರಹವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1999 ರಿಂದ 2023 ನೇ ಸಾಲಿನವರೆಗೂ ನಮ್ಮ ಪಂಚಾಯಿತಿಯಲ್ಲಿ ಇರುವ ದಾಖಲೆಗಳನ್ನು ಪರಿಶೀಲನೆ ಮಾಡಿ, ಲಕ್ಷ್ಮನಾಯ್ಕರವರ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ ಎಂದು ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಸೇವಾಲಾಲ್ ಗ್ರಾಮದ ವ್ಯಾಪ್ತಿಯಲ್ಲಿ ಇರುವ ಮನೆಗಳು ಮತ್ತು ಖಾಲಿ ಜಾಗ ಇಲ್ಲಿಯವರೆಗೂ ಸರ್ವೆ ಆಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಕೆಲವೊಂದು ಮನೆ ಮತ್ತು ಸೈಟ್ ಗಳು ಸರ್ವೆ ಆಗಿದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ವಾದಿಯ ವಾರಸುದಾರರು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿಗಳಿಗೆ ತೊಂದರೆಯನ್ನು ಕೊಡುವ ಉದ್ದೇಶದಿಂದ ನನ್ನ ಹೆಂಡತಿಯ ಮೂಲಕ ಇನ್ನೊಂದು ದಾವೆಯನ್ನು ಸಲ್ಲಿಸಿದ್ದು ಮತ್ತು ಈ ಪ್ರಕರಣದಲ್ಲಿ ಸುಳ್ಳು ಪ್ರತಿವಾದ ಪತ್ರವನ್ನು

ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ವಾದಿಗೆ ಸಂಪೂರ್ಣ ಹಕ್ಕು ಬಾಧ್ಯತೆ ಮತ್ತು ಸ್ವಾಧೀನದಲ್ಲಿ ಇರುವುದರಿಂದ ನನಗೆ ಯಾವುದೇ ಹಕ್ಕು ಮತ್ತು ಬಾಧ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.